# ತಪ್ಪುಗಳೆಲ್ಲವ ಒಪ್ಪಿಕೊಳ್ಳಯ ಶ್ರೀ ಚಪ್ಪರ ಶ್ರೀನಿವಾಸಾ

(ಹರಿದಾಸ ನಾರ್ಣಪ್ಪಯ್ಯನವರು ಶ್ರೀ ದೇವರ ಅನೇಕ ಭಕ್ತರಲ್ಲಿ ಒರ್ವರು. ಇವರು ಪಾವಂಜೆಯಲ್ಲಿ ೧೮೫೫ರಲ್ಲಿ ಜನಿಸಿದರು. ಕಾಶೀಮಠದ ಶ್ರೀ ಭುವನೇಂದ್ರ ಸ್ವಾಮಿಗಳ ಆಶ್ರಯದಲ್ಲಿದ್ದು ಕಾವ್ಯಾದಿ ಅಭ್ಯಾಸ ಮಾಡಿ ಪ್ರಸಿದ್ಧ ಕಥಾನಾಯಕ ಸಿದ್ದಾಪುರ ವೆಂಕಟರಮಣ ಪ್ರಭುಗಳಿಂದ ಕಥೋಪದೇಶವನ್ನು ಪಡೆಕೊಂಡವರು. ಊರೂರಿಗೆ ಹೋಗಿ ಹರಿಕತೆಗಳನ್ನು ಮಾಡಿ ಬಂದ ಹಣದಲ್ಲಿ ಒಂದಾಣೆಯನ್ನು ಶ್ರೀ ದೇವರಿಗೆ ಪ್ರತಿವಾರ ಕಾಣಿಕೆ ಹಾಕಿ ಒಂದು ಡಬ್ಬಿಯನ್ನು ಮಾಡಿಟ್ಟಿದ್ದರು. ಒಮ್ಮೆ ಅನಾರೋಗ್ಯ ಪೀಡಿತರಾದಾಗ ಆ ಕಾಣಿಕೆ ಡಬ್ಬಿಯಿಂದ ಹಣವನ್ನು ತೆಗೆದು ಚಿಕಿತ್ಸೆಗೆ ಉಪಯೋಗಿಸಿದರು. ಮುಂದೆ ಮಾಡಿದ ತಪ್ಪಿನ ಅರಿವಾಗಿ ಶ್ರೀ ದೇವರ ಸನ್ನಿದಾನಕ್ಕೆ ಬಂದು ಕಾಲಭೈರವನ ಸನ್ನಿಧಿಯಲ್ಲಿ ಮಾಡಿದ ತಪ್ಪುಗಳನ್ನು ಈ ಕೆಳಗಿನ ಪದ್ಯರೂಪದಲ್ಲಿ ಹಾಡಿ ಕ್ಷಮೆ ಯಾಚಿಸಿದಾಗ ಭಕ್ತವತ್ಸಲನಾದ ಚಪ್ಪರ ಶ್ರೀನಿವಾಸನು ಕಾಲಭೈರವನ ಮುಖಾಂತರ ಮಾಡಿದ ತಪ್ಪನ್ನು ಮನ್ನಿಸಿದ್ದನು. ಇವರು ಮುಂದೆ ಶ್ರೀ ದೇವರ ಮಹಿಮೆ, ಕಾರಣಿಕ, ಉತ್ಸವ ವೈಭವಗಳುಳ್ಳ ಹಲವಾರು ಹಾಡುಗಳನ್ನು ರಚಿಸಿರುತ್ತಾರೆ.)

ತಪ್ಪುಗಳೆಲ್ಲವ ಒಪ್ಪಿಕೊಳ್ಳಯ್ಯ ಶ್ರೀ ಚಪ್ಪರ ಶ್ರೀನಿವಾಸಾ ।
ಸರ್ಪರಾಜ ಗಿರಿಯಪ್ಪ ತಿಮ್ಮಪ್ಪ ಕಂದರ್ಪ ತಾತನೆ ಅಬ್ಜನ ಪ್ರೀತ ॥ ಅ.ಪ ॥

ಮಾಧವ ನಿನ್ನಯ ಮಹಿಮೆ ತಿಳಿಯದಪರಾಧವ ಮಾಡಿದೆ ದಾರಿದ್ರ್ಯದ ।
ಬಾಧೆಯಿಂದ ತವ ಪಾದ ದರುಶನದ । ಹಾದಿಯ ಕಾಣದಾದೆ ನಾ ದ್ರೋಹಿಯಾದೆ ॥೧॥

ತ್ರಾಣವಿರುವಾಗ ಕಾಣಿಕೆ ಹಾಕಿದೆ । ದೀನ ದಾರಿದ್ರ್ಯದ ಹೊತ್ತಿನಲಿ ।
ಮೇಣದರಿಂದಲಿ ತೆಗೆದು ಪಂಚಪ್ರಾಣಕ್ಕಾಹುತಿಯ ಕೊಟ್ಟೆ ॥ ಅಪರಾದಪಟ್ಟೇ ॥ ೨ ॥

ಮಂದವಾರ ದಿನಕ್ಕೊಂದೂಟವ ಸವ್ರತ । ದಿಂದಿರುವಾಗ ನಾನೇ ದಂಗ್ಯಾದೆ ।
ಮಂದಭಾಗ್ಯ ಜ್ವರದಿಂದ ಪೀಡಿತ ವಾದ । ರಿಂದೆರಡೂಟವನು ಮಾಡಿದೆ ನಾನು ॥೩॥

ಶನಿವಾರ ಕೊಂದಾಣೆ ಕಾಣಿಕೆ ಹಾಕುತ । ಮಿನುಗುವ ಡಬ್ಬಿಯ ನಾ ಮಾಡಿದೆ ।
ಎನಗೆ ದಾರಿದ್ರ್ಯವ ಕೊಟ್ಟ ಕಾರಣದಿಂದ । ಹಣವೆಲ್ಲ ಗುಣ ನುಂಗಿತು । ಪಾದಕೆ ಗೊತ್ತು ॥ ೪ ॥

ದೊಡ್ಡ ದಾರಿದ್ರ್ಯದ ಗುಡ್ಡೆ ಬಿದ್ದುದರಿಂದ । ದುಡ್ಡೆಲ್ಲಾ ತೆಗೆದೆ ನ ದಡ್ಡನಾಗಿ ॥
ಅಡ್ಡಬಿದ್ದು ಕೈಯೊಡ್ಡಿ ಬೇಡುವೆ ಸ್ವರ್ಣ । ಗುಡ್ಡೆಯ ಮೇಲಿರುವ ಮಹಾನುಭಾವ ॥೫॥

ಭಂಡಾರ ದ್ರೋಹ ಬ್ರಹ್ಮಾಂಡದಾ ಸ್ವಾಮಿಯು । ಮಂಡೆಯೊಳಗಿರುವುದು ಖಂಡಿತವು ।
ಪುಂಡರಿಕಾಕ್ಷನೆ ಕರುನಾಮೃತ ರಸ । ಕ್ಕುಂಡದೋಳಿಮೀಳಿಸಯ್ಯ ವೆಂಕಟರಾಯ ॥೬॥

ದೃಡ ಭಕ್ತಿಯನು ಕೊಟ್ಟು ಸಲಹಬೇಕಲ್ಲದೆ । ಕೆಡುಕ ಮಾಡುವುದೇನು ಜಡಜನಾಭ ।
ಕಡಲಶಯನ ಲಕ್ಷ್ಮೀ ನಾರಾಯಣನ । ನಮ್ಮೊಡೆಯ ಪಡುತಿರುಪತೀಶ ರವಿಕೋಟಿ ಭಾಸ ॥೭॥

--- ooo ---